**ಕಾಡುಪ್ರಾಣಿಗಳ ಸಂಖ್ಯೆ ಹೆಚ್ಚುತ್ತಿರುವಾಗ ಹತ್ಯೆಯಂತಹ ಕ್ರೌರ್ಯಕ್ಕೆ ಪರ್ಯಾಯವಾಗಿ ಸಂತಾನ ನಿಯಂತ್ರಣ ವ್ಯವಸ್ಥೆಯ ಪರವಾಗಿ ಕೂಗು ಕೇಳಿಬರುತ್ತಿದೆ. ಸಂತಾನ ನಿಯಂತ್ರಣದ ಲಸಿಕೆಯ ಪ್ರಯೋಗ ಈಗಾಗಲೇ ಕೆಲ ದೇಶಗಳಲ್ಲಿ ಹೆಣ್ಣಾನೆಗಳ ಮೇಲೆ ಹಂತ ಹಂತವಾಗಿ ನಡೆದಿದೆ. ಅಲ್ಲಿಯ ಕಾಡುಗಳಲ್ಲಿ ಆನೆಗಳ ಸಂತತಿ ನಿಗದಿತ ಸಂಖ್ಯೆಯನ್ನು ಮೀರಿ ಬೆಳೆಯದಂತೆ ಹತೋಟಿಗೆ ತರಲಾಗಿದೆ. ಈ ಪ್ರಯೋಗವು ಮಾನವ–ಕಾಡುಪ್ರಾಣಿಗಳ ಸಂಘರ್ಷ ತಡೆಗೆ ಪರ್ಯಾಯ ಮಾರ್ಗದಂತಿದೆ. ಕರ್ನಾಟಕದ ಅರಣ್ಯ ಸಚಿವರೂ ಸಂತಾನ ಶಕ್ತಿ ನಿಯಂತ್ರಣ ಬಗ್ಗೆ ಚರ್ಚೆ ನಡೆಯಲಿ ಎಂದಿದ್ದಾರೆ. ಈ ನಿಟ್ಟಿನಲ್ಲಿ ಯಾವ ರೀತಿಯ ಸಂಶೋಧನೆ ಮತ್ತು ಪ್ರಯೋಗ ನಡೆದಿದೆ ಎಂಬುದರ ಬಗ್ಗೆ ಈ ಲೇಖನ ಬೆಳಕು ಚೆಲ್ಲಲಿದೆ.**



ಗಜಗಳು ಅವುಗಳ ತಾತ ಮುತ್ತಾತನ ಕಾಲದಿಂದಲೂ ಅವು ಕಂಡುಕೊಂಡ ದಾರಿಯಲ್ಲೇ ಅಕ್ಕಪಕ್ಕದ ಕಾಡಿಗೆ ಹೋಗುವಾಗ ತೋಟ, ಹಳ್ಳಿಗಳನ್ನು ದಾಟಿಕೊಂಡು ಓಡಾಡುತ್ತಿವೆ. ಮರಿಗಳಿಗೂ ಅದೇ ದಾರಿಯನ್ನು ತೋರಿಸುತ್ತವೆ. ಕೆಲವು ತೋಟದಲ್ಲೇ ಆಶ್ರಯ ಪಡೆಯುತ್ತಿವೆ. ಇದರಿಂದಾಗಿ ಅದೆಷ್ಟೋ ಜೀವಹಾನಿಯಾಗಿದೆ. ಇದರಲ್ಲಿ ಗ್ರಾಮಸ್ಥರು ಸೇರಿದ್ದಾರೆ, ಆನೆಗಳು ಸೇರಿವೆ. ಆದರೆ ಇದರ ಸಂತತಿ ನಿಯಂತ್ರಣ ಸಾಧ್ಯವಿಲ್ಲವೇ.

ದೇಶದಲ್ಲಿ ಆನೆಗಳ ಸಂಖ್ಯೆ ಬೆಳೆಯುತ್ತಲೇ ಇದೆ. 1978ರಿಂದ ಐದು ವರ್ಷಕ್ಕೊಮ್ಮೆ ಕೇಂದ್ರ ಸರ್ಕಾರ ನಡೆಸಿದ ರಾಷ್ಟ್ರೀಯ ಗಣತಿಯ ಅಂಕಿ ಅಂಶಗಳ ಪ್ರಕಾರ 1978–83ರಲ್ಲಿ 19,558 ಇದ್ದ ಸಂಖ್ಯೆ 1993ರಲ್ಲಿ 25,569ಕ್ಕೆ ಏರಿ 2021–25ರಲ್ಲಿ 22,446ಕ್ಕೆ ಬಂದಿದೆ. ಇದೀಗ ಪಶ್ಚಿಮ ಘಟ್ಟದ ಹಾದುಹೋಗುವ ಕರ್ನಾಟಕದಲ್ಲಿ 6013, ಪಕ್ಕದ ತಮಿಳುನಾಡಿನಲ್ಲಿ 3136 ಮತ್ತು ಕೇರಳದಲ್ಲಿ 2785 ಕಾಡಾನೆಗಳಿವೆ. ಅಂದರೆ ಗಜಗಳ ಸಂಖ್ಯೆ 2017ರವರೆಗೆ ನಿರಂತರವಾಗಿ ಏರುಗತಿಯಲ್ಲಿದ್ದು 2025ರಲ್ಲಿ ಕೊಂಚ ಕುಸಿದಿದೆ. (ವಿವರವನ್ನು ಚಾರ್ಟ್‌ನಲ್ಲಿ ನೀಡಲಾಗಿದೆ)

ಆಫ್ರಿಕಾ ಖಂಡದ ಕೆಲ ದೇಶಗಳ ಕಾಡಂಚಿನ ಜನ ಕರ್ನಾಟಕದ ಮಲೆನಾಡಿನಲ್ಲಿ ಎದುರಿಸುತ್ತಿರುವ ರೀತಿಯಲ್ಲೇ ಆನೆ ಉಪಟಳವನ್ನು ಎದುರಿಸುತ್ತಿದ್ದರು. ಆಫ್ರಿಕಾದ ಗಜಗಳು ಭಾರತದ ಆನೆಗಳಿಗಿಂತ ಎತ್ತರ ಮತ್ತು ಅಲ್ಲಿಯ ಹೆಣ್ಣಾನೆಗೂ ದಂತವಿರುತ್ತದೆ. ಸಂತಾನ ಹೆಚ್ಚಳ, ಮಾನವ ಆನೆ ಸಂಘರ್ಷ ಅಲ್ಲೂ ನಡೆದಿತ್ತು. ಆ ದೇಶಗಳಲ್ಲಿ ಒಂದು ಆನೆ ವಂಶಕ್ಕೆ ಸೇರಿದ ಅನೇಕ ಗುಂಪುಗಳ, ಒಂದೇ ಒಂದು ಆನೆಯು ಉಳಿಯದಂತೆ ಗುಂಡಿಟ್ಟು ಕೊಲ್ಲುವ ಅಮಾನುಷ ಕೆಲಸವೂ ನಡೆದಿತ್ತು. ಇದರ ಜೊತೆಯಲ್ಲಿ ಆಫ್ರಿಕಾ ಖಂಡದ ಬಡ ರಾಷ್ಟ್ರಗಳು ಆನೆ ಕೊಲ್ಲುವ ಕ್ರೀಡೆಗೆ ಹಣ ಪಡೆದು ಲೈಸೆನ್ಸ್ ಸಹ ನೀಡಿದ್ದವು. ಹತ್ಯೆ ಮಾಡುವಾಗ ಆ ಗುಂಪಿನ ಕೆಲ ಆನೆಗಳು ಉಳಿದರೂ ರೊಚ್ಚಿಗೆದ್ದು ಮತ್ತಷ್ಟು ಉಪಟಳ ಮಾಡುವುದು ನಡೆದಿತ್ತು.

ಕ್ರೂರ ಎನಿಸಿಕೊಳ್ಳುವ ಹತ್ಯೆಗೆ ಪರ್ಯಾಯವಾಗಿ ಸಂತಾನ ನಿಯಂತ್ರಣ ಲಸಿಕೆಯ ಪ್ರಯೋಗ ದಕ್ಷಿಣ ಆಫ್ರಿಕಾ ದೇಶದ ಕ್ರೂಗರ್ ರಾಷ್ಟ್ರೀಯ ಉದ್ಯಾನದಲ್ಲಿ ಹೆಣ್ಣಾನೆಗಳ ಮೇಲೆ ಹಲವು ಹಂತಗಳಲ್ಲಿ ನಡೆದಿದೆ. ಅಲ್ಲಿಯ ಸಣ್ಣ ಸಣ್ಣ ಖಾಸಗಿ ಕಾಡುಗಳಲ್ಲಿ ಆನೆಗಳ ಸಂತತಿ ನಿಗದಿತ ಸಂಖ್ಯೆಯನ್ನು ಮೀರಿ ಬೆಳೆಯದಂತೆ ನಿಯಂತ್ರಿಸಲಾಗಿದೆ. ಈ ಲಸಿಕೆಯಲ್ಲಿರುವ ಪ್ರೋಟಿನ್ ವಿರುದ್ಧ, ಹೆಣ್ಣಾನೆಗಳ ದೇಹವು ಆ್ಯಂಟಿಬಾಡಿ ಸೃಷ್ಟಿಸಿ ಪ್ರತಿರೋಧ ಬೆಳೆಸಿಕೊಳ್ಳುತ್ತವೆ. ಈ ಆ್ಯಂಟಿಬಾಡಿಗಳು ಗಂಡಿನ ವೀರ್ಯಾಣುಗಳ ಮೇಲೆ ಅಂಟಿಕೊಂಡು ಹೆಣ್ಣಿನ ಅಂಡಾಣು ಪ್ರವೇಶಿಸದಂತೆ ತಡೆಯುತ್ತವೆ. ಹೀಗಾಗಿ ಹೆಣ್ಣಾನೆ ಗರ್ಭ ಧರಿಸುವುದಿಲ್ಲ. ಇದು ಯಶಸ್ವಿಯಾಗಿದೆ ಸಹ. ಇದರ ಸವಿವರವಾದ ಲೇಖನವನ್ನು 2007ರಲ್ಲೇ ಪಾಂಚಿಡರ್ಮ್ ವೈಜ್ಞಾನಿಕ ಪತ್ರಿಕೆ ಪ್ರಕಟಿಸಿದೆ.

1976ರಲ್ಲೇ ಜೋಲ ಪೆಲ್ಲುಸಿಡಾ ಎನ್ನುವ ಸಂತಾನ ನಿಯಂತ್ರಣ ಲಸಿಕೆ (ಜಡ್‌ಪಿ ಲಸಿಕೆ)ಯನ್ನು ಪೇಟೆಂಟ್ ಮಾಡಿಸಲಾಗಿದೆ. ಕ್ರಿಕ್‌ಪ್ಯಾಟ್ರಿಕ್ ಮತ್ತು ಟರ್ನರ್ ಎನ್ನುವವರು ಇದನ್ನು 1988–89ರ ನಡುವೆ ಕುದುರೆಗಳ ಮೇಲೆ ಈ ಲಸಿಕೆಯನ್ನು ಪ್ರಯೋಗಿಸಿದರು. ಲಸಿಕೆ ಕೆಲಸ ಮಾಡಬೇಕಾದರೆ ಎಷ್ಟು ಡೋಸ್ ಪ್ರಯೋಗಿಸಬೇಕು. ಇದರಿಂದ ಏನಾದರೂ ದೇಹದ ಮೇಲೆ ನಕಾರಾತ್ಮಕ ಬದಲಾವಣೆ ಆಗುವುದೇ ಮತ್ತು ಕುದುರೆಗೆ ಯಾವ ರೀತಿ ಲಸಿಕೆಯನ್ನು ಚುಚ್ಚಬೇಕು ಎನ್ನುವ ಪ್ರಯೋಗ ನಡೆಯಿತು.

ಇದಾದ ನಂತರ ಮೃಗಾಲಯದಲ್ಲಿ ಆನೆಗಳ ಮೇಲೆ ನಡೆದ

